ಆ) ಉದ್ಭವಿಸುವುದಿಲ್ಲ.

ಗೃಹ ರಕ್ಷಕ ದಳದವರಿಗೆ ದಿನದ ಭತ್ಯೆ ಹೆಚ್ಚಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 39(487)

ಸದಸ್ಯರ ಹೆಸರು: ಶ್ರೀಮತಿ ಅನುಸೂಯಮ್ಮ ನಟರಾಜನ್ ಕೆ.ಎ(ಚಿಕ್ಕಬಳ್ಳಾಪುರ)

ಉತ್ತರಿಸುವ ಸಚಿವರು: ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು)

ಪ್ರಶ್ನೆ

1. ಗೃಹರಕ್ಷಕ ದಳದ ಸಿಬ್ಬಂದಿಗೆ ದಿನ ಒಂದಕ್ಕೆ ಕೇವಲ ರೂ.70-00ಗಳನ್ನು ಮಾತ್ರ ಕೊಡುತ್ತಿದ್ದು, ದಿನಭತ್ಯೆಯನ್ನು ಹೆಚ್ಚು ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಉತ್ತರ

1. ರಾಜ್ಯದಲ್ಲಿನ ಗೃಹರಕ್ಷಕ ಸ್ವಯಂ ಸೇವಕರನ್ನು ಕರ್ತವ್ಯ : ತರಬೇತಿಗೆ ಕರೆದಾಗ ದಿನವೊಂದಕ್ಕೆ ತಲಾ ಒಬ್ಬರಿಗೆ ರೂ. 70-00ರಂತೆ ನೀಡಲಾಗುತ್ತಿರುವ ಕರ್ತವ್ಯ ಭತ್ಯೆಯ ದರವನ್ನು ಹೆಚ್ಚಿಸುವ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿದೆ.

ಧಾರವಾಡ ಬಸ್ ನಿಲ್ದಾಣ ಕಾಮಗಾರಿ ವಿವರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 40(461)

ಸದಸ್ಯರ ಹೆಸರು: ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ(ಧಾರವಾಡ)

ಉತ್ತರಿಸುವ ಸಚಿವರು: ಶ್ರೀ ಸಿ.ಆರ್.ಸಗೀರ್ ಅಹಮದ್(ಸಾರಿಗೆ ಸಚಿವರು)

ಪ್ರಶ್ನೆ

ಅ) ಧಾರವಾಡ ಮುಖ್ಯ ಬಸ್ ನಿಲ್ದಾಣದ ಕಟ್ಟಡದ ಕೆಲಸ ಎಷ್ಟು ತಿಂಗಳಲ್ಲಿ ಮುಗಿಸಬೇಕಾಗಿದೆ? ಸದರಿ ಕಟ್ಟಡದ ವೆಚ್ಚ ಮಾಡುವ ಹಣ ಎಷ್ಟು? ಇದರಲ್ಲಿ ಬರುವ ಪ್ಲಾಟ್ ಫಾರ್ಮಗಳ ಸಂಖ್ಯೆ ಎಷ್ಟು? ವಾಹನಗಳು ನಿಲ್ಲುವ ಸಂಖ್ಯೆ ವಿವರ ತಿಳಿಸುವುದು?

ಆ) ಸದ್ಯ ಇರುವ ಮುಖ್ಯ ವಾಹನ ನಿಲ್ದಾಣವನ್ನು ನಗರದ ವಾಹನದ (ಸಿಟಿ ಬಸ್) ನಿಲ್ದಾಣವನ್ನಾಗಿ ಮಾರ್ಪಡಿಸುವ ಯೋಜನೆ ಇರುವುದೇ, ಹಾಗಿದ್ದಲ್ಲಿ ವಿವರ ತಿಳಿಸುವುದು?

ಇ) ಧಾರವಾಡ ವಾಹನ ಡಿಪೋ ನಗರದಲ್ಲಿ ಇರುವುದನ್ನು ಹೊಸ ಮುಖ್ಯ ವಾಹನದ ಹತ್ತಿರದಲ್ಲಿಯ ನಿವೇಶನಕ್ಕೆ ತರುವ ಯೋಜನೆ ಇರುವುದೇ;

ಈ) ಹಾಗಿದ್ದಲ್ಲಿ ಹೊಸ ಸ್ಥಳದಲ್ಲಿರುವ ಒಟ್ಟು ಭೂಮಿಯ ವಿಸ್ತೀರ್ಣವೆಷ್ಟು?

ಉತ್ತರ

ಆ) ಧಾರವಾಡ ನೂತನ ಬಸ್ ನಿಲ್ದಾಣದ ಕಾಮಗಾರಿಯು ಟೆಂಡರ್ ಕರಾರು ಪತ್ರದ ಪ್ರಕಾರ ನವೆಂಬರ್-02 ರೊಳಗಾಗಿ ಪೂರ್ಣಗೊಳ್ಳಬೇಕಿರುತ್ತದೆ. ಸದರಿ ಕಟ್ಟಡದ ಅಂದಾಜು ವೆಚ್ಚ ರೂ.125.00 ಲಕ್ಷಗಳಾಗಿರುತ್ತದೆ. ಕಟ್ಟಡದಲ್ಲಿ ಏಕಕಾಲಕ್ಕೆ 22 ಬಸ್‌ಗಳನ್ನು ನಿಲ್ಲಿಸಲು ಅವಕಾಶ ಕಲ್ಪಿಸಲಾಗುತ್ತಿದೆ.

ಆ) ಹೊಸ ಬಸ್ ನಿಲ್ದಾಣ ಪ್ರಾರಂಭವಾದ ಮೇಲೆ ಹಾಲಿ ನಿಲ್ದಾಣವನ್ನು ನಗರ: ಉಪನಗರ ಸಾರಿಗೆಗಳಿಗೆ ಉಪಯೋಗಿಸಲಾಗುವುದು.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಚಾಮರಾಜನಗರದಲ್ಲಿ ಕೆ.ಎಸ್.ಆರ್.ಟಿ.ಸಿ. ಡಿಪೋ ಆರಂಭಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 44(471)

ಸದಸ್ಯರ ಹೆಸರು: ಶ್ರೀ ಗುರುಸ್ವಾಮಿ ಸಿ.(ಚಾಮರಾಜನಗರ)

ಉತ್ತರಿಸುವ ಸಚಿವರು: ಶ್ರೀ ಸಿ.ಆರ್.ಸಗೀರ್ ಅಹಮದ್(ಸಾರಿಗೆ ಸಚಿವರು)

ಪ್ರಶ್ನೆ

ಅ. ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿ ಕೆ.ಎಸ್.ಆರ್.ಟಿ.ಸಿ. ಡಿಪೋ ಆರಂಭಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ. ಗ್ರಾಮಾಂತರ ಪ್ರದೇಶಗಳಿಗೆ ನಗರ ಸಾರಿಗೆ